**ಓ.ಎಸ್. ನಂ. 111/2021** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 25.10.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ವಾದಿಯು ನನಗೆ ನೀಡಿರುವ ಜಿ.ಪಿ.ಎ ಅನ್ನು ನಿಪಿ1 ಎಂದು ಗುರುತಿಸಲಾಯಿತು. 12 ಕೈ ಬರಹ ಪಹಣಿಯ ದೃಢೀಕೃತ ನಕಲನ್ನು ನಿಪಿ2 ರಿಂದ ನಿಪಿ13 ಎಂದು, ಮೂರು ಇಂಡೆಕ್ಸ ಆಫ್ ಲ್ಯಾಂಡ್‌ನ ದೃಢೀಕೃತ ನಕಲನ್ನು ನಿಪಿ14 ರಿಂದ ನಿಪಿ16 ಎಂದು, ಮೂರು ರೆಕಾರ್ಡ ಆಫ್ ರೈಟ್ಸನ ದೃಢೀಕೃತ ನಕಲನ್ನು ನಿಪಿ17 ರಿಂದ ನಿಪಿ19 ಎಂದು, ದಾವಆಸ್ತಿಗಳಿಗೆ ಸಂಬಂಧಪಟ್ಟ 10 ಪಹಣಿಗಳನ್ನು ನಿಪಿ20 ರಿಂದ ನಿಪಿ29 ಎಂದು, ದಿನಾಂಕ 14.12.2016 ರ ದಾನಪತ್ರದ ದೃಢೀಕೃತ ನಕಲನ್ನು ನಿಪಿ30 ಎಂದು, ಕುಟುಂಬದ ವಂಶವೃಕ್ಷದ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ರುಜುವಾತುಪಡಿಸುವ ಷರತ್ತಿನಂತೆ ಅದನ್ನು ನಿಪಿ31 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.